ಓ.ಎಸ್. ನಂ.549/2012 ರಲ್ಲಿ
ಪಿ.ಡಬ್ಲ್ಯೂ-1(ಶಿವಣ್ಣ)

ದಿನಾಂಕ 05-03-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1ನೇ ಪ್ರತಿವಾದಿಯ ವಾರಸುದಾರರು ಮತ್ತು 2ನೇ ಪ್ರತಿವಾದಿ ಪರ ಶ್ರೀ ಕೆ.ಬಿ.ವಿ., ವಕೀಲರಿಂದಃ-

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ನಾನು ಯಾವ ಇಸವಿಯಲ್ಲಿ ಹುಟ್ಟಿದ್ದು ಎಂದು ನನಗೆ ಗೊತ್ತಿಲ್ಲ. ನನ್ನ ವಯಸ್ಸು ಅಂದಾಜು ಈಗ 65 ವರ್ಷ ಆಗಿರಬಹುದು. ಬುಡ್ಡಕೆಂಪಯ್ಯರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಅವರ ಪತ್ನಿಯ ಹೆಸರು ಸಹ ನನಗೆ ಗೊತ್ತಿಲ್ಲ. ಬುಡ್ಡಕೆಂಪಯ್ಯ ಮತ್ತು ಬೈರಮ್ಮ ರವರನ್ನು ನೋಡಿದ್ದೇನೆ. ಬೈರಮ್ಮ ಬುಡ್ಡಕೆಂಪಯ್ಯರವರು ತೀರಿಕೊಳ್ಳುವ ಮುಂಚೆಯೇ ತೀರಿಕೊಂಡಿದ್ದರು ಎಂದರೆ ಸರಿ. ಬುಡ್ಡಕೆಂಪಯ್ಯ ಮತ್ತು ಬೈರಮ್ಮರವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಎಂದರೆ ಸರಿ. ಆ ನಾಲ್ಕು ಜನ ಹೆಣ್ಣು ಮಕ್ಕಳು ಯಾವಾಗ ಹುಟ್ಟಿದರು, ಯಾವಾಗ ಮದುವೆಯಾದರು ಎಂದು ನನಗೆ ಗೊತ್ತಿಲ್ಲ. ಸಿದ್ದಮ್ಮ ತೀರಿಕೊಂಡು 7-8 ವರ್ಷಗಳಾಗಿವೆ. ಕೆಂಪಮ್ಮ ತೀರಿಕೊಂಡು 7-8 ವರ್ಷಗಳಾಗಿವೆ. ಚನ್ನಮ್ಮ ತೀರಿಕೊಂಡು ಅಂದಾಜು 40, 45 ವರ್ಷಗಳಾಗಿರಬಹುದು.

2. ಚಿಕ್ಕಮ್ಮನಿಗೆ ಮೂರು ಜನ ಮಕ್ಕಳು, ಅವರೆಂದರೆ ಮಲ್ಲಮ್ಮ, ಮಲ್ಲಯ್ಯ ಮತ್ತು ನಾನು ಶಿವಣ್ಣ. ಸಾಕ್ಷಿಯು ಸ್ವಇಚ್ಛೆಯಿಂದ ನನ್ನ ಅಣ್ಣ ಮಲ್ಲಯ್ಯ ಮತ್ತು ನನ್ನ ಅಕ್ಕ ಮಲ್ಲಮ್ಮ ನನಗೆ ಕೇಸು ಬೇಡ, ನೀನೇ ಕೇಸು ನಡೆಸಿಕೋ ಎಂದು ಹೇಳಿದರು ಎಂದು ನುಡಿಯುತ್ತಾರೆ. ಕೆಂಪಮ್ಮನ ಮೊದಲನೇ ಮಗಳು ಚಿಕ್ಕಬೈರಕ್ಕ ತೀರಿಕೊಂಡಿದ್ದಾರೆ. ಅವರು ತೀರಿಕೊಂಡು 6 ವರ್ಷಗಳಾಗಿರಬಹುದು. ಚಿಕ್ಕಬೈರಮ್ಮನಿಗೆ ಮೂರು ಜನ

ಮಕ್ಕಳು. ಅವರೆಂದರೆ ಶಿವರುದ್ರ, ಭಾಗ್ಯಮ್ಮ ಮತ್ತು ಕೃಷ್ಣಮೂರ್ತಿ. ಕೆಂಪಮ್ಮನನ್ನು ಕರಡಿಗೌಡನದೊಡ್ಡಿಗೆ ಮದುವೆ ಮಾಡಿದ್ದಾರೆ. ಚಿಕ್ಕಬೈರಮ್ಮನನ್ನು ಅದೇ ಊರಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಚಿಕ್ಕಬೈರಮ್ಮನ ಮಕ್ಕಳು ನಮ್ಮ ಜೊತೆ ಚೆನ್ನಾಗಿದ್ದಾರೆ. ಚಿಕ್ಕಬೈರಕ್ಕ ಮತ್ತು ಅವರ ಮಕ್ಕಳು ಹುಟ್ಟಿ ಬೆಳೆದದ್ದು ಕರಡಿಗೌಡನದೊಡ್ಡಿಯಲ್ಲಿ ಎಂದರೆ ಸರಿ.

3. ಚನ್ನಮ್ಮನನ್ನು ತಾಳಕುಪ್ಪೆಗೆ ಕೊಟ್ಟು ಮದುವೆ ಮಾಡಿದ್ದಾರೆ. ಚನ್ನಮ್ಮನ ಪತಿಯ ಹೆಸರು ನನಗೆ ಜ್ಞಾಪಕವಿಲ್ಲ. ಚನ್ನಮ್ಮನಿಗೆ ಇಬ್ಬರು ಮಕ್ಕಳು, ಅವರೆಂದರೆ ವೆಂಕಟರಮಣಪ್ಪ ಮತ್ತು ಲಕ್ಷ್ಮಿದೇವಮ್ಮ. ವೆಂಕಟರಮಣಪ್ಪ ತೀರಿಕೊಂಡಿದ್ದಾರೆ. ಅವರ ಪತ್ನಿ ಮಹದೇವಮ್ಮ. ಅವರ ಮಕ್ಕಳೆಂದರೆ ಕವಿತ, ಪುಷ್ಪಲತಾ, ನಾಗರಾಜು. ಮಹದೇವಮ್ಮ ಮತ್ತು ಅವರ ಮಕ್ಕಳು ನಮ್ಮ ಜೊತೆ ಚೆನ್ನಾಗಿದ್ದಾರೆ. ಸಾಕ್ಷಿಯು ಸ್ವಇಚ್ಛೆಯಿಂದ ಅವರು ಕೇಸು ನಡೆಸಿ ಎಂದು ಸಹಿ ಹಾಕಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಅವರೆಂದರೆ ಪ್ರತಿವಾದಿ 3 ರಿಂದ 7. ನನ್ನ ಅಣ್ಣ ಮಲ್ಲಯ್ಯ ಆರೋಗ್ಯವಾಗಿ ಚೆನ್ನಾಗಿದ್ದಾರೆ. ಚಿಕ್ಕಬೈರಕ್ಕನ ಮಕ್ಕಳು ಆರೋಗ್ಯವಾಗಿ ಚೆನ್ನಾಗಿದ್ದಾರೆ. ಪ್ರತಿವಾದಿ 3 ರಿಂದ 7 ರವರು ಆರೋಗ್ಯವಾಗಿ ಚೆನ್ನಾಗಿದ್ದಾರೆ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಕೊಡುವಷ್ಟು ಚೈತನ್ಯ ಇದೆ.

4. ಬುಡ್ಡಕೆಂಪಯ್ಯನಿಗೆ ಒಟ್ಟು ನಾಲ್ಕು ಎಕರೆ ಚಿಲ್ಲರೆ ಜಮೀನು ಇತ್ತು. ಅವುಗಳ ಸರ್ವೇ ನಂ.2/34 ರಲ್ಲಿ 21 ಗುಂಟೆ, ಸರ್ವೇ ನಂ.3/1 ರಲ್ಲಿ 1 ಎಕರೆ 11 ಗುಂಟೆ, ಸರ್ವೇ ನಂ.7/8 ರಲ್ಲಿ 3 ಎಕರೆ 35 ಗುಂಟೆ.

ಚಿಕ್ಕಮ್ಮನ ಗಂಡನ ಹೆಸರು ಮಲ್ಲಯ್ಯ ಅಲಿಯಾಸ್ ಮೂಗಪ್ಪ. ಚಿಕ್ಕಮ್ಮ ಮದುವೆಯಾದಾಗಿನಿಂದ ಗಂಡನ ಮನೆಯಲ್ಲೇ ಇರುತ್ತಾರೆ. ಸಾಕ್ಷಿಯು ಒಂದೇ ಊರಿಗೆ ಕೊಟ್ಟು ಮದುವೆ ಮಾಡಿದ್ದಾರೆ, ಅಲ್ಲೇ ಇದ್ದಾರೆ ಎಂದು ನುಡಿಯುತ್ತಾರೆ. ನನ್ನ ತಾಯಿಯನ್ನು ಸಹ ರಾಮನಹಳ್ಳಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಸಾಕ್ಷಿಯು ಮುಂದುವರೆದ ಸಿದ್ದಮ್ಮನನ್ನು ಸಹ ಅದೇ ಊರಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯ ಜಮೀನಿನಲ್ಲಿ ನೀವು, ನಿಮ್ಮ ತಾಯಿ, ನೀವೆಲ್ಲಾ ವ್ಯವಸಾಯ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ಸ್ವಲ್ಪ ಇದ್ದದ್ದು, ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ತಂದೆಯ ಮನೆಯಲ್ಲೇ ನಾವು ವಾಸವಿದ್ದೇವೆ. ಸಿದ್ದಮ್ಮನನ್ನು ತಿಮ್ಮಯ್ಯ ಉರುಫ್ ಗುಡುಗಪ್ಪನವರಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ.

ಈ ಹಂತದಲ್ಲಿ ಬೇರೆ ಪ್ರಕರಣಗಳು ವಿಚಾರಣೆಗೆ ಇರುವುದರಿಂದ ಸಮಯದ ಅಭಾವದಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.